ಒ.ಎಸ್. ನಂ.48/2021
ಡಿಡಬ್ಲು-1

ದಿನಾಂಕ 07.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟಿ ಸವಾಲುಃ ವಾದಿ ಪರ ವಕೀಲರಿಂದಃ

ವಾದಿ ನಮ್ಮ ಊರಿನವರಾಗಿರುವುದರಿಂದ ಅವರ ಪರಿಚಯವಿದೆ. ನಾನು ವಾದಿಗೆ ದಿನಾಂಕ 25.07.2017 ರಂದು ನೊಂದಾಯಿತ ಖರೀದಿ ಪತ್ರ ಬರೆದುಕೊಟ್ಟಿರುತ್ತೇನೆ ಎಂದರೆ ಸಾಕ್ಷಿ ಸಾಲ ಮಾಡಿಸುತ್ತೇವೆ ಎಂದು ಬರೆಸಿಕೊಂಡಿರುತ್ತಾರೆ ಎಂದು ಹೇಳುತ್ತಾರೆ. ನಿಪಿ-1 ರಲ್ಲಿ ನನ್ನ ಭಾವಚಿತ್ರ ಇರುತ್ತದೆ ಎಂದರೆ ಸಾಕ್ಷಿ ನನಗೆ ಸಾಲ ಕೊಡಿಸುತ್ತೇವೆ ಎಂದು ನನ್ನ ಭಾವಚಿತ್ರ ತಗೆದುಕೊಂಡಿರುತ್ತೇನೆ ಎಂದು ಹೇಳುತ್ತಾರೆ. ನನ್ನ ಭಾವಚಿತ್ರವನ್ನು ಉಪ ನೊಂದಾಣಿಧಿಕಾರಿ ಕಚೇರಿಯಲ್ಲಿ ತೆಗೆದಿರುತ್ತಾರೆ ಎಂದರೆ ಸಾಕ್ಷಿ ನನಗೆ ಸಾಲ ಕೊಡಿಸುತ್ತೇವೆ ಎಂದು ನನ್ನ ಭಾವಚಿತ್ರ ತಗೆದುಕೊಂಡಿರುತ್ತಾರೆ ಎಂದು ಹೇಳುತ್ತಾರೆ. ನನ್ನ ಗಂಡನ ಹೆಸರು ಶಿವಪ್ಪ ಎಂದರೆ ಸರಿ. ಶಿವಪ್ಪನ ತಂದೆ ಹೆಸರು ಸಿದ್ದಪ್ಪ ಬಾಚಿಮಠ ಎಂದರೆ ಸರಿ. ನಿಪಿ-1 ರಲ್ಲಿ ನನ್ನ ಗಂಡ ಸಹಿ ಮಾಡಿರುತ್ತಾನೆ ಎಂದರೆ ಸರಿ. ನಿಪಿ-1 ರಲ್ಲಿ ನನ್ನ ಹೆಬ್ಬಟ್ಟಿನ ಸಹಿ ಇರುತ್ತದೆ ಎಂದರೆ ಸರಿ. ನಿಪಿ-1 ರಲ್ಲಿ ಭೀಮಯ್ಯ ತಂದೆ ತುಳಜಾರಾಮ ಗುತ್ತೆದಾರ, ಭೀಮರಾಯ ತಂದೆ ನರಸಪ್ಪ ಯಂಕಂಚಿ, ಶರಣಬಸಪ್ಪ ತಂದೆ ಸಾಯಬಣ್ಣ ಹೊಸಮನಿ ರವರು ಜನಿವಾರ ಗ್ರಾಮದವರು ಎಂದರೆ ನನಗೆ ಗೊತ್ತಿಲ್ಲ. ಸದರಿಯವರು ನಿಪಿ-1 ರಲ್ಲಿ ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ದಾವಾಸ್ತಿ ಖರೀದಿ ಆಗುವವುದಕ್ಕಿಂತ ಮುಂಚೆ ಸರ್ವೆ ಆಗಿರುತ್ತದೆ ಎಂದರೆ ಸರಿಯಲ್ಲ. ಸರ್ವೆ ದಾಖಲೆಗಳು ನಿಪಿ-1 ಕ್ಕೆ ಲಗತ್ತಿಸಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನೊಂದಣಿಯಾಗುವ ಸಮಯದಲ್ಲಿ ವಾದಿ ನನಗೆ ರೂ.3,62,000/- ಗಳನ್ನ ನಗದು ರೂಪದಲ್ಲಿ ಕೊಟ್ಟಿರುತ್ತಾರೆ. ದಾವಾಸ್ತಿ ನೊಂದಣಿಯಾದ ಮೇಲೆ ದಾವಾಸ್ತಿಯನ್ನು ವಾದಿಗೆ ಕಬ್ಜೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ವಾದಿ ಮತ್ತು ವಾದಿಯ ಗಂಡನ ಮೇಲೆ ಸಾಕಷ್ಟು ಬಾರಿ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ವಾದಿ ಮತ್ತು ವಾದಿಯ ಗಂಡ ಸಾಗುವಳಿ ಮಾಡಿದ ಬೆಳೆಯನ್ನು ನಾನು ಹಾಳು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಈ ವಿಚಾರವಾಗಿ ವಾದಿ ನಿಮ್ಮ ವಿರುದ್ದ ಬೆಳೆ ಹಾನಿದ ಮಾಡಿದ ವಿಚಾರವಾಗಿ ಜೇವರ್ಗಿ ಠಾಣೆ ಗುನ್ನೆ ನಂ.228/2021 ಪ್ರಕರಣ ದಾಖಲಾಗಿರುತ್ತದೆ ಎಂದರೆ ಸರಿ. ವಾದಿಯ ಗಂಡನೂ ಸಹ ಜೇವರ್ಗಿ ಠಾಣೆ ಗುನ್ನೆ ನಂ.19/2022 ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿ. ವಾದಿಗೆ ದಾವಾಸ್ತಿ ಮಾರಾಟ ಮಾಡಿದರೂ ಸಹ ಅವರಿಗೆ ತೊಂದರೆ ಕೊಡುತ್ತಿದ್ದೇನೆ ಎಂದರೆ

ಸರಿಯಲ್ಲ. ನಾನು ದಾವಾಸ್ತಿಯನ್ನು ಮಾರಾಟ ಮಾಡಿ ಎಲ್ಲಾ ಹಣ ಪಡೆದಿದ್ದರಿಂದ ನನಗೆ ದಾವಾಸ್ತಿಯಲ್ಲಿ ಯಾವುದೆ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ದಿನಾಂಕ 25.07.2017 ರಿಂದ ಇಲ್ಲಿಯವರೆಗೆ ವಾದಿ ದಾವಾಸ್ತಿಯನ್ನು ಮೋಸದಿಂದ ನೊಂದಣಿ ಮಾಡಿದ ಬಗ್ಗೆ ನಾನು ಯಾವುದೆ ಸಿವಿಲ್ ಪ್ರಕರಣ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ದಾವಾಸ್ತಿಯನ್ನು ಕಬ್ಜೆ ನೀಡುವಂತೆ ನಾನು ಯಾವುದೆ ಸಿವಿಲ್ ಪ್ರಕರಣ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ದಾವಾಸ್ತಿಯಲ್ಲಿ ನನಗೆ ಯಾವುದೆ ಹಕ್ಕು ಇಲ್ಲದಿದ್ದರೂ ಸಹ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ

ಸಿವಿಲ್ ನ್ಯಾಯಾಧೀಶರು
ಜೇವರ್ಗಿ